ದಿಃ 19.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಕೆ.ಎ.ಎಸ್., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 30.01.2012 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 14.10.2019 ರ ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ವಂಶವೃಕ್ಷವನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, Mutation Register ನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 10/2 ಎ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 7/2 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 14/2 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ದಿಃ 05.07.2007 ರ ಆಧಾರ ಕುಲಾಸೆ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು,

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು, ನೀಡಿಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿಃ 04.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ, ವಕೀಲರಿಂದ ವಾದಿ ಪರವಾಗಿ**

3. ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ಶ್ರೀ ಎಸ್.ಬಿ.ಎ., ವಕೀಲರಿಂದ 1, 2 ಮತ್ತು 4 ನೇ ಪ್ರತಿವಾದಿ ಪರವಾಗಿ**

4. ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ನೀಡಲಾಯಿತು.

**ಪಾಟೀ ಸವಾಲು ಶ್ರೀ ಡಿ.ಎಸ್., ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ**

5. ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 19.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎಸ್.ಬಿ.ಎ., ವಕೀಲರಿಂದ 1, 2 ಮತ್ತು 4 ನೇ ಪ್ರತಿವಾದಿಗಳ ಪರವಾಗಿ**

6. ನನ್ನ ತಾಯಿಯು ನನ್ನ ಜೊತೆಯೇ ವಾಸವಾಗಿರುತ್ತಾರೆ. ನನ್ನ ತಾಯಿಯು ಯಾವುದೇ ಉದ್ಯೋಗದಲ್ಲಿ ಇರುವುದಿಲ್ಲ ಗೃಹಿಣಿಯಾಗಿರುತ್ತಾರೆ. ನನ್ನ ತಾಯಿಯು ಆರೋಗ್ಯವಾಗಿರುತ್ತಾರೆ ಆದರೆ ಸ್ವಲ್ಪ ಬೆನ್ನು ನೋವಿನಿಂದ ಬಳಲುತ್ತಿದ್ದಾರೆ. ನನ್ನ ತಾಯಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ತೊಂದರೆ ಇರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ತಾಯಿಗೆ ಪ್ರಯಾಣ ಮಾಡಲು ತೊಂದರೆ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸುಮಾರು 85 ವರ್ಷ ಆಗಿರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲಾತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವ ಬಿ. ಶೆಡ್ಯೂಲ್ ನಂಬರ್ ನಲ್ಲಿ ಇರುವ ಐಟಂ ನಂಬರ್ 1 ಮತ್ತು 2 ಆಸ್ತಿಗಳನ್ನು ನ್ಯಾಯಾಲಯದಲ್ಲಿ ದಾವೆಯ ಮೂಲಕ 1 ನೇ ಪ್ರತಿವಾದಿಗೆ ಬಂದಿರುತ್ತದೆ. ಮೂಲತಃ ದಾವ ಬಿ. ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ತಂದೆಯ ಆಸ್ತಿ ಎಂದರೆ ಸರಿ. ದಾವ ಆಸ್ತಿಯು ನನ್ನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು ನನ್ನ ತಾತನಿಂದ ಅಜ್ಜಿಗೆ ಬಂದಿರುತ್ತದೆ. ದಾವ ಎ ಶೆಡ್ಯೂಲ್ ಆಸ್ತಿಯು ಮೂಲತಃ 5 ಎಕರೆ ವಿಸ್ತೀರ್ಣ ಇತ್ತು. ದಾವ ಎ ಶೆಡ್ಯೂಲ್ ಆಸ್ತಿಯು 5 ಎಕರೆ ವಿಸ್ತೀರ್ಣ ಇತ್ತು ಎಂದು ನನ್ನ ಅಜ್ಜಿ, ನನ್ನ ತಂದೆ ಹೇಳಿ ನನಗೆ ಗೊತ್ತಾಗಿರುತ್ತದೆ. ಈ ದಾವೆಯನ್ನು ದಾಖಲು ಮಾಡಲು ಮಾಹಿತಿಯನ್ನು ನನ್ನ ತಾಯಿಯೇ ವಕೀಲರಿಗೆ ನೀಡಿರುತ್ತಾರೆ. ಈ ದಾವೆಯ ಬಗ್ಗೆ ನನ್ನ ತಾಯಿಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ನನಗೂ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಈ ದಾವೆಯ

ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ ದಶರಥ ರವರ ವಿರುದ್ದ ದಾವೆಯನ್ನು ಸಲ್ಲಿಸಿದ್ದರು. ದಾವ ಬಿ. ಶೆಡ್ಯೂಲ್ ಆಸ್ತಿಯ ಬಗ್ಗೆ 1 ನೇ ಪ್ರತಿವಾದಿಯು ದಶರಥ ರವರ ವಿರುದ್ದ ದಾವೆ ಹೂಡಿರುತ್ತಾರೆ ಎಂದು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಯಾವ ವರ್ಷದಲ್ಲಿ ದಾವ ಆಸ್ತಿಯು 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ.

7. ದಾವ ಬಿ. ಶೆಡ್ಯೂಲ್ ಆಸ್ತಿಯು ನ್ಯಾಯಾಲಯದಿಂದ 1 ನೇ ಪ್ರತಿವಾದಿಯ ಹೆಸರಿಗೆ ಆದ ನಂತರ ಸದರಿ ಆಸ್ತಿಯ ಖಾತೆ ಮತ್ತು ಸ್ವಾಧೀನ 1 ನೇ ಪ್ರತಿವಾದಿಯೇ ಇರುತ್ತಾರೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯು ನ್ಯಾಯಾಲಯದ ಆದೇಶದಂತೆ 1 ನೇ ಪ್ರತಿವಾದಿಗೆ ಬಂದ ನಂತರ ಇಂದಿನವರೆಗೂ 1 ನೇ ಪ್ರತಿವಾದಿಯೇ ಮಾಲೀಕರು ಎಂದರೆ ಸಾಕ್ಷಿಯು ದಾಖಲೆಯ ಪ್ರಕಾರ ಮಾಲೀಕರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ದಾವ ಬಿ. ಶೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕರಾಗಿರುವುದರಿಂದ ಸದರಿ ಆಸ್ತಿಯನ್ನು ಮಾರಾಟ ಮಾಡಲು ಮತ್ತು ದಾನ ಮಾಡಲು 1 ನೇ ಪ್ರತಿವಾದಿಯ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವ ಬಿ. ಶೆಡ್ಯೂಲ್ ಆಸ್ತಿಯಲ್ಲಿ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಕುಟುಂಬದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವ ಬಿ. ಶೆಡ್ಯೂಲ್ ಆಸ್ತಿಯು ಕುಟುಂಬದ ಆಸ್ತಿ ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ದಾವ ಬಿ. ಶೆಡ್ಯೂಲ್ ಆಸ್ತಿಯು ಒಟ್ಟು 5 ಎಕರೆ ಇರುತ್ತದೆ. ಸರ್ವೆ ನಂಬರ್ 14/2 ರಲ್ಲಿ 3 ಎಕರೆ ಆಸ್ತಿಯನ್ನು ನನ್ನ ತಂದೆಯು ಇರುವಾಗಲೇ 1 ನೇ ಪ್ರತಿವಾದಿಯು 7 ವರೆ ಲಕ್ಷ ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಸದರಿ ಖರೀದಿದಾರರ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಖರೀದಿದಾರರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ. ಸದರಿ ಮಾರಾಟ ಮಾಡಿದ ಹಣದಲ್ಲಿ 3 ಲಕ್ಷ ರೂಪಾಯಿಯನ್ನು 1 ನೇ ವಾದಿ ಮತ್ತು ಅವರ ಪತಿ ಚಂದ್ರಶೇಖರ್ ರವರು 1 ನೇ ಪ್ರತಿವಾದಿಯು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ತಂದೆ ಸದರಿ 3 ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 3 ಲಕ್ಷ ರೂಪಾಯಿಯಲ್ಲಿ ನನ್ನ ತಾಯಿಯು 50 ಸಾವಿರ ರೂಪಾಯಿಯನ್ನು ನೀಡಿದ್ದು ಸದರಿ 50 ಸಾವಿರ ರೂಪಾಯಿಗೆ 1 ನೇ ಪ್ರತಿವಾದಿಯು 25 ಸಾವಿರ ರುಪಾಯಿಯನ್ನು ಸೇರಿಸಿ ಒಟ್ಟು 75 ಸಾವಿರ ರೂಪಾಯಿಯನ್ನು ನನ್ನ ಹೆಸರಿನಲ್ಲಿ ಎಫ್.ಡಿ. ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು ಅಪ್ರಾಪ್ತಗಿದ್ದೆನು ಎಂದರೆ ಸರಿ. ನಾನು ಅಪ್ರಾಪ್ತನಾಗಿರುವ ಸಮಯದಲ್ಲಿ ಆಗಿರುವ ವ್ಯವಹಾರದ ಬಗ್ಗೆ ನನ್ನ ತಾಯಿ ಮತ್ತು ತಂದೆಗೆ ಚೆನ್ನಾಗಿ ತಿಳಿದಿರುತ್ತದೆ ಎಂದರೆ ಸರಿ.

8. ದಾವ ಬಿ ಶೆಡ್ಯೂಲ್ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಮನೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಗೆ 1 ನೇ ಪ್ರತಿವಾದಿಯು ಮನೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಆಸ್ತಿ ಮಾರಾಟ ಮಾಡಿರುವ ಬಗ್ಗೆ ಪಂಚಾಯಿತಿ ಆಗಿರುತ್ತದೆ. ಸದರಿ ಪಂಚಾಯಿತಿಯಲ್ಲಿ ನನ್ನ ಮಾವ ದಿವಾಕರ್ ಹಾಜರಿದ್ದರು ಬೇರೆ ಯಾರು ಹಾಜರಿದ್ದರು ಎಂದು ನನಗೆ ನೆನಪಿಲ್ಲ. ನನ್ನ ತಾಯಿಯ ಸಹಿಯನ್ನು ನೋಡಿದರೆ ಗುರುತಿಸಬಲ್ಲೆನು. ಸದರಿ ಪಂಚಾಯಿತಿಯ ಬಗ್ಗೆ ಸಂಪೂರ್ಣ ಮಾಹಿತಿ ನನ್ನ ತಾಯಿಗೆ ಇರುತ್ತದೆ ಎಂದರೆ ಸರಿ. ನನ್ನ ತಾಯಿಯು ಆರೋಗ್ಯವಂತರಾಗಿದ್ದು ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಾಗಲಿ ಅಥವಾ ದಾವೆಯಲ್ಲಿ ಆಗಲಿ ನನ್ನ ತಾಯಿಗೆ ಅನಾರೋಗ್ಯ ಇರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೀಡಿರುವ ಅಧಿಕಾರ ಪತ್ರದಲ್ಲಿ ಅನಾರೋಗ್ಯ ಇರುವ ಬಗ್ಗೆ ತಿಳಿಸಿರುತಾತರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನ ತಾಯಿಯು ಅಧಿಕಾರ ನೀಡಿರುತ್ತಾರೆ

ಎಂದು ನುಡಿಯುತ್ತಾರೆ. ನಾನು Diploma ಮಾಡಿರುತ್ತೇನೆ. ನಾನು ಬೆಂಗಳೂರಿನ ಟಿ.ಸಿ.ಎಸ್. ಕಂಪನಿಯಲ್ಲಿ ಉದ್ಯೋಗ ಮಾಡಿಕೊಂಡಿರುತ್ತೇನೆ. ನನ್ನ ತಂದೆಯು ಪ್ಲಂಬರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯು ಪ್ಲಂಬರ್ ಆಗಿ ಸ್ವಂತ ಉದ್ಯೋಗವನ್ನು ಮಾಡಿಕೊಂಡಿದ್ದರು. ನನ್ನ ತಂದೆಗೆ ಮದ್ಯಪಾನ ಸೇವನೆ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ನನ್ನ ತಂದೆಯು ಸುಮಾರು 45 ವರ್ಷ ಪ್ರಾಯದಲ್ಲಿ ಮೃತಪಟ್ಟಿರುತ್ತಾರೆ. ನನ್ನ ವಿದ್ಯಾಭ್ಯಾಸವನ್ನು 1 ನೇ ಪ್ರತಿವಾದಿಯೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯು ಸದರಿ ಪಂಚಾಯಿತಿ ಆಗುವ ಪೂರ್ವದಲ್ಲಿ ಗೃಹಿಣಿಯಾಗಿಯೇ ಯಾವುದೇ ಉದ್ಯೋಗದಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆಯು ಮದ್ಯ ಸೇವನೆ ಅಭ್ಯಾಸವನ್ನು ಹೊಂದಿದ್ದರಿಂದ ನನ್ನ ವಿದ್ಯಾಭ್ಯಾಸ, ಆರೋಗ್ಯವನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿಯು ಮಾರಾಟ ಮಾಡಿ ಬಂದಿರುವ ಹಣದಲ್ಲಿ ಸಾಲವನ್ನು ಮರುಪಾವತಿ ಮಾಡಿರುತ್ತಾರೆ ಸಾಕ್ಷಿಯು ಮುಂದುವರೆದು ಕೈ ಸಾಲಗಳು, State Bank of Mysore ಮತ್ತು ನನ್ನ ಚಿಕ್ಕಪ್ಪನಾದ 2 ನೇ ಪ್ರತಿವಾದಿಯ ವಿದ್ಯಾಭ್ಯಾಸದ ಸಾಲದ ಹಣವನ್ನು ಮರುಸಂದಾಯ ಮಾಡಿರುತ್ತಾರೆ. ನನ್ನ ತಂದೆಗೆ ಅನಾರೋಗ್ಯ ಇರುವ ಸಮಯದಲ್ಲಿ ನನ್ನ ಮಾವ ದಿವಾಕರ್ ರವರು ನೀಡಿರುವ ಸಾಲವನ್ನು 1 ನೇ ಪ್ರತಿವಾದಿಯು ಮರುಪಾವತಿ ಮಾಡಿರುತ್ತಾರೆ. ದಾವ ಎ ಶೆಡ್ಯೂಲ್ ಆಸ್ತಿಯಲ್ಲಿ 4500 ಛದರ ಅಡಿ ಜಾಗವನ್ನು ಇಂದಿರಾ ರಾಜು ರವರು ಗಣೇಶ್ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ದಾವ ಎ ಶೆಡ್ಯೂಲ್ ಆಸ್ತಿಯು ಯಾವ ದಿಕ್ಕಿಗೆ ಇರುವ ಸದರಿ 4500 ಛದರ ಅಡಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ದಿಕ್ಕು ಹೇಳಲು ಸಾಧ್ಯವಿಲ್ಲ. ದಾವ ಆಸ್ತಿಯ ಚಕ್ಕುಬಂದಿಯನ್ನು ನನ್ನ ತಾಯಿಯೇ ಹೇಳಿ ಬರೆಸಿರುತ್ತಾರೆ. ದಾವ ಆಸ್ತಿಯ ಚಕ್ಕುಬಂದಿಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವ ಎ ಶೆಡ್ಯೂಲ್ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ 4500 ಛದರ ಅಡಿಯ ಜಾಗವನ್ನು ಮಾರಾಟ ಮಾಡಿರುತ್ತಾರೆ. ದಕ್ಷಿಣ ದಿಕ್ಕಿಗೆ ಇರುವ ಆಸ್ತಿಯನ್ನು

ಮಾರಾಟ ಮಾಡಿದ ಬಗ್ಗೆ ದಾವ ಎ ಶೆಡ್ಯೂಲ್ ಆಸ್ತಿಯಲ್ಲಿ ತೋರಿಸಿರುತ್ತೇನೆ. ಸದರಿ ದಾವ ಎ ಶೆಡ್ಯೂಲ್ ಆಸ್ತಿಯ ಭಾಗವನ್ನು ಖರೀದಿ ಮಾಡಿರುವ ಖರೀದಿದಾರರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 21.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಬಿ.ಎ., ವಕೀಲರಿಂದ 1, 2 ಮತ್ತು 4 ನೇ ಪ್ರತಿವಾದಿಗಳ ಪರವಾಗಿ</u>**

10. ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಅಭಿವೃದ್ದಿ ಪಡಿಸಲು ನನ್ನ ತಂದೆಯು ಹಣ ವಿನಿಯೋಗ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ನನ್ನ ತಂದೆಯು ಅವರಿಗೆ 47 ವರ್ಷ ಪ್ರಯಾವಾಗಿರುವಾಗ ಮೃತಪಟ್ಟಿರುತ್ತಾರೆ. 1 ನೇ ಪ್ರತಿವಾದಿಯು 2007 ರಲ್ಲಿ ಪ್ರಕಾಶ್ ಮತ್ತು ಸಂಜು ರವರಿಗೆ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ನನ್ನ ತಂದೆಯು ಜೀವಂತ ಇದ್ದರು. ಪ್ರಕಾಶ್ ಮತ್ತು ಸಂಜು ರವರಿಗೆ ಮಾರಾಟ ಮಾಡಿರುವ ಆಸ್ತಿಯ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯು 1 ನೇ ಪ್ರತಿವಾದಿಯು ಸಂಜು ಮತ್ತು ಪ್ರಕಾಶ್ ರವರಿಗೆ ಮಾರಾಟ ಮಾಡಿರುವ ಕ್ರಯ ಪತ್ರ ಎಂದು ಒಪ್ಪಿಕೊಂಡ ಕಾರಣ ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿ, ನನ್ನ ತಂದೆ, 1 ನೇ ಪ್ರತಿವಾದಿಯ ಮಗಳು ಪ್ರೇಮಾ, ನನ್ನ ತಾಯಿ ಮತ್ತು 2 ನೇ ಪ್ರತಿವಾದಿಯು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ.ಡಿ.1 ಕ್ರಯ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿ ಇರುತ್ತದೆ. ನಿ.ಡಿ.1 ರ ಕ್ರಯ ಪತ್ರದಲ್ಲಿ ಸದರಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಸದರಿ ಆಸ್ತಿಯಲ್ಲಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ಸರಿ. ನನ್ನ ತಾಯಿಯು ಈಗ ಆರೋಗ್ಯವಾಗಿ ಇರುತ್ತಾರೆ ಆದರೆ ಪ್ರಯಾಣ ಮಾಡಲು ಕಷ್ಟವಾಗುತ್ತದೆ. ನಾನು ಈ ದಿನ ಮೂಡಿಗೆರೆಗೆ ಬಂದಿರುತ್ತೇನೆ. ನನ್ನ ತಾಯಿಯು ಈ ದಿನ ಮೂಡಿಗೆರೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯು ಈ ದಿನ

ಮೂಡಿಗೆರೆಯಲ್ಲಿ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಡಿಗೆರೆ ಎಸ್.ಬಿ.ಐ ಬ್ಯಾಂಕಿನಲ್ಲಿ ನನ್ನ ತಾಯಿಯು ಖಾತೆ ಹೊಂದಿರುತ್ತಾರೆ ಎಂದರೆ ಸರಿ. ಮೂಡಿಗೆರೆ ಎಸ್.ಬಿ.ಐ ಬ್ಯಾಂಕಿನಲ್ಲಿ ಈ ಹಿಂದೆಯು ನನ್ನದು ಯಾವುದೇ ಬ್ಯಾಂಕು ಖಾತೆ ಇರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆಯು ನನ್ನ ತಾಯಿ ಅನುಸೂಯ ರವರಿಗೆ ಸೇರಿದ ಬ್ಯಾಂಕು ಖಾತೆಯಾಗಿದ್ದು ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಒಪ್ಪಿಕೊಂಡ ಕಾರಣ ನಿ.ಡಿ.2 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು 1 ನೇ ಪ್ರತಿವಾದಿಗೆ ಸೇರಿದ ಬ್ಯಾಂಕ್ ದಾಖಲಾತಿ ಎಂದು ಸಾಕ್ಷಿ ನೋಡಿ ಒಪ್ಪಿಕೊಂಡ ಕಾರಣ ನಿ.ಡಿ.3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲಾತಿಯು ನನ್ನ ತಾಯಿಯ ಬ್ಯಾಂಕ್ ಖಾತೆಯ ದಾಖಲಾತಿ ಎಂದು ಒಪ್ಪಿಕೊಂಡ ಕಾರಣ ನಿ.ಡಿ.4 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು 1 ನೇ ಪ್ರತಿವಾದಿ, ನನ್ನ ತಂದೆ ಮತ್ತು ನನ್ನ ತಾಯಿಯ State Bank of Mysore ನಲ್ಲಿ ಇರುವ ಬಾಂಡ್ ಎಂದು ಒಪ್ಪಿಕೊಂಡ ಕಾರಣ ನಿ.ಡಿ.5 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು ನನ್ನ ತಾಯಿಯು ನನ್ನ ಪರವಾಗಿ ಮಾಡಿರುವ ಬ್ಯಾಂಕ್ ಬಾಂಡ್ ಎಂದು ಸಾಕ್ಷಿಯು ಒಪ್ಪಿಕೊಂಡ ಕಾರಣ ನಿ.ಡಿ.6 ಎಂದು ಗುರುತಿಸಲಾಯಿತು. ಎಸ್.ಬಿ.ಐ ಬ್ಯಾಂಕ್ ನಲ್ಲಿ ಇದ್ದ ರೂ.75,000-00 ಬಾಂಡ್ ನ್ನು ನಾನು ಮತ್ತು ನನ್ನ ತಾಯಿಯು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಇದ್ದ ರೂ.2,25,000-00 ಬಾಂಡ್ ನ್ನು ನಾನು ಮತ್ತು ನನ್ನ ತಾಯಿಯು ರಿಲೀಸ್ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

11. ಪಂಚಾಯಿತಿ ಮಾಡಿರುವ ದಿವಾಕರ್ ಎನ್ನುವವರು ತಿಪಟೂರಿನ ವಾಸಿಯಾಗಿರುತ್ತಾರೆ. 1 ನೇ ಪ್ರತಿವಾದಿಯು 2007 ರಲ್ಲಿ ಆಸ್ತಿ ಮಾರಾಟ

ಮಾಡಿ ಬಂದ ಹಣದಲ್ಲಿ ನನ್ನ ಹೆಸರಿಗೆ ಮತ್ತು ನನ್ನ ತಾಯಿಯ ಹೆಸರಿಗೆ ನಿ.ಡಿ.5 ಮತ್ತು 6 ರಂತೆ ಇಟ್ಟಿರುವ ಬಾಂಡ್ ಎಂದರೆ ಸರಿಯಲ್ಲ. ನನ್ನ ತಂದೆಯು ಹೃದಯಾಘಾತವಾಗಿ ಮೃತಪಟ್ಟಿರುತ್ತಾರೆ ಎಂದು ಮೂಡಿಗೆರೆ ನಿವಾಸಿಯಾದ ಅನಿತಾ ರವರು ನನಗೆ ತಿಳಿಸಿರುತ್ತಾರೆ. ನಾನು ಆ ಸಮಯದಲ್ಲಿ ಮೈಸೂರಿನಲ್ಲಿ ವಾಸವಾಗಿದ್ದೆನು. ನನ್ನ ತಂದೆಯು ಸುಮಾರು ವರ್ಷಗಳಿಂದ ಮದ್ಯಪಾನ ಸೇವನೆ ಮಾಡುತ್ತಿದ್ದರು. ನನ್ನ ತಂದೆಯು ಮೃತಪಡುವ ಸಮಯದಲ್ಲಿ ನನಗೆ 22 ವರ್ಷ ವಯಸ್ಸಾಗಿರುತ್ತದೆ. ನನ್ನ ವಿಧ್ಯಾಭ್ಯಾಸಕ್ಕೆ 1 ನೇ ಪ್ರತಿವಾದಿಯೇ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ವಿಪರೀತ ಮದ್ಯಪಾನ ಸೇವನೆ ಮಾಡುತ್ತಿರುವುದರಿಂದ ನನ್ನ ತಂದೆಯ ಬಳಿ ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ 1 ನೇ ಪ್ರತಿವಾದಿಯೇ ನನ್ನ ಸಂಪೂರ್ಣ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವ ಆಸ್ತಿಯು ನ್ಯಾಯಾಲಯದ ಆದೇಶದಂತೆ 1 ನೇ ಪ್ರತಿವಾದಿಗೆ ಬಂದಿರುವುದರಿಂದ ಸದರಿ ಆಸ್ತಿಯು ಸ್ತ್ರೀದನ ಆಗಿರುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ದಾವ ಆಸ್ತಿಯ ಅಭಿವೃದ್ದಿಗೆ ಹಣ ತೊಡಗಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವ ಆಸ್ತಿಯ ಮೇಲೆ ಮೂಡಿಗೆರೆಯ ಸ್ಟೇಟ್ ಬ್ಯಾಂಕಿನಲ್ಲಿ ಸಾಲ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿಯು ಮೂಡಿಗೆರೆಯ ಪಿ.ಎಲ್.ಡಿ ಬ್ಯಾಂಕ್ ನಲ್ಲಿ ದಾವ ಆಸ್ತಿಯ ಅಭಿವೃದ್ದಿಗೆ ಸಾಲ ಮಾಡಿರುವ ವಿಚಾರವು ನನಗೆ ಗೊತ್ತಿರುವುದಿಲ್ಲ. ಸ್ಟೇಟ್ ಬ್ಯಾಂಕಿನಲ್ಲಿ 1 ನೇ ಪ್ರತಿವಾದಿಯು ಎಷ್ಟು ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಬ್ಯಾಂಕಿನಲ್ಲಿ ಸಾಲ ಪಡೆದ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. 1 ನೇ

ಪ್ರತಿವಾದಿಯು ಹಳೆಯ ಎಸ್.ಬಿ.ಎಂ ಬ್ಯಾಂಕು ಮೂಡಿಗೆರೆ ಶಾಖೆಯಲ್ಲಿ ಸದರಿ ಸಾಲವನ್ನು ಪಡೆದಿದ್ದರು. ನಿ.ಪಿ.8 ದಾಖಲೆಯು ಮೂಡಿಗೆರೆ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮತ್ತು1 ನೇ ಪ್ರತಿವಾದಿಯ ನಡುವೆ ಆಗಿರುವ ಆಧಾರ ಕುಲಾಸೆ ಪತ್ರ ಆಗಿರುತ್ತದೆ. 1 ನೇ ಪ್ರತಿವಾದಿಯು ಬ್ಯಾಂಕಿನಿಂದ ಸಾಲ ಪಡೆದು ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ.8 ದಾಖಲಾತಿಯು ಸರಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ಜಮೀನು ಅಭಿವೃದ್ದಿಗಾಗಿ ಸಾಲ ಪಡೆದಿರುತ್ತಾರೆ ಆದರೆ ಸದರಿ ಸಾಲವನ್ನು ಬೇರೆ ಉದ್ದೇಶಕ್ಕಾಗಿ ಬಳಸಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.8 ದಾಖಲಾತಿಯ ಬಗ್ಗೆ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

12. ದಾವ ಬಿ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿ. ದಾವ ಬಿ ಶೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕರು 2 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವ ಬಿ ಶೆಡ್ಯೂಲ್ ಆಸ್ತಿಗೆ ದಾನ ಪತ್ರ ಮಾಡಲು ಸಂಪೂರ್ಣ ಅಧಿಕಾರ ಇತ್ತು ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಟ್ಟಿರುವ ದಾನ ಪತ್ರವು ಊರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಐಟಂ ನಂಬರ್ 2 ಆಸ್ತಿಯನ್ನು 1 ನೇ ಪ್ರತಿವಾದಿಯು ಮಾಲ್ತಿಯವರಿಗೆ ಮಾರಾಟ ಮಾಡಿರುವುದು ಕೂಡ ಕಾನೂನು

ಭದ್ದವಾಗಿರುತ್ತದೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯಲ್ಲಿ ನನ್ನದು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವ ಎ ಶೆಡ್ಯೂಲ್ ಆಸ್ತಿಯಲ್ಲಿ ನನಗೆ ಎಷ್ಟು ಹಕ್ಕು ಇರುತ್ತದೋ ಅಷ್ಟೇ ಹಕ್ಕು ಪ್ರತಿವಾದಿಗೆ ಇರುತ್ತದೆ ಎಂದರೆ ಸರಿ. ದಾವ ಎ ಶೆಡ್ಯೂಲ್ ಆಸ್ತಿಯ ಸ್ವಲ್ಪ ಭಾಗವನ್ನು ಗಣೇಶ್ ಎನ್ನುವವರಿಗೆ 1 ನೇ ಪ್ರತಿವಾದಿಯ ಅತ್ತೆಯನ್ನು ನೋಡಿಕೊಳ್ಳುತ್ತಿದ್ದ ಇಂದ್ರಾರಾಜು ಮತ್ತು ಪುಷ್ಪಾ ರವರು ಮಾರಾಟ ಮಾಡಿರುತ್ತಾರೆ. ಸದರಿ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಡಿ.ಎಸ್., ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ</u>**

13. 3 ನೇ ಪ್ರತಿವಾದಿಯ ಪರವಾಗಿ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 06.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಪಾಟೀ ಸವಾಲು ಶ್ರೀ ಡಿ.ಎಸ್., ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ</u>**

14. .

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ